


ಜಾರಿಗೆ ಬಂದಿದ್ದು, ರಕ್ತಸಂಬಂಧಿಗಳಿಗೆ, ಪತಿ ಪತ್ನಿಯರಿಗೆ ಅಥವಾ ತುಂಬಾ ಪ್ರೀತಿ ಪಾತ್ರರಾದವರಿಗೆ ಮಾತ್ರ ಅಂಗಾಂಗಗಳನ್ನು ದಾನ ಮಾಡಬಹುದೆಂಬ ಕಾಯಿದೆಯಿದ್ದು, ಹಣಕ್ಕಾಗಿ ದಾನ ಮಾಡಿದರೆ, ಇಬ್ಬರಿಗೂ (ಅಂದರೆ ಕೊಟ್ಟವರಿಗೂ, ಪಡೆದವರಿಗೂ) ತಪ್ಪು ದಂಡ ವಿಧಿಸಲಾಗುವುದೆಂಬ ಕಾಯಿದೆಯಿದೆ. ಆದರೂ ಇಂತಹ ತಪ್ಪುಗಳು ನಡೆಯುತ್ತಿರುವುದು ನೋಡಿ ನನಗೆ ಅತೀವ ಖೇದವಾಯಿತು.

ಕಡುಬಡತನ, ನಿರುದ್ಯೋಗ, ಸಾಂಸಾರಿಕ ಘರ್ಷಣೆ, ಅನಕ್ಷರತೆ, ಭಾರತಕ್ಕೆ ವೀಸಾ ಇಲ್ಲದೆ ಪ್ರಯಾಣಿಸಬಹುದಾದ ಸಾಧ್ಯತೆಗಳು ಇಂತಹ ಕಿಡ್ನಿ ದಾನಗಳಿಗೆ ಕಾರಣವಾಗುತ್ತಿವೆಯೆಂದು ನನಗನ್ನಿಸಿತು.

ನನ್ನ ಗೆಳೆಯ ರಿತ್ವಿಕ್ ಭೇಟಿ ಮಾಡಿದ ಮನೆಯವರ ಕಥೆ ಮತ್ತೂ ಶೋಚನೀಯ. ಸಾವಿತ್ರಿ ಶಿವಕುಮಾರ್ ಎಂಬ ದಂಪತಿಗಳು ಸ್ವಂತ ಮನೆ ಕಟ್ಟಲು ದೆಹಲಿಗೆ ಹೋಗಿ ಮೂತ್ರಪಿಂಡ ಮಾರಿ ಎರಡು ಲಕ್ಷ ಹಣ ಪಡೆದು ಬಂದಿದ್ದಾರೆ. ಮೂತ್ರಪಿಂಡ ಪಡೆದ ಅರಬ್ಬಿ ವ್ಯಾಪಾರಿಗಳು ಅವರನ್ನು ದೆಹಲಿಗೆ ವಿಮಾನದಲ್ಲಿ ಕರೆಸಿಕೊಂಡು, ಹಿಂದಕ್ಕೆ ಕಳುಹಿಸಿದ್ದಾರೆ. ಹೀಗೆ ಇಬ್ಬರೂ ಮೂತ್ರಪಿಂಡಗಳನ್ನು ಮಾರಿ ಬಂದ ಹಣದಿಂದ ಮನೆ ಕಟ್ಟಿಕೊಂಡಿದ್ದಾರೆ. 2014ರ ಭೂಕಂಪದಲ್ಲಿ ಆ ಮನೆ ಕುಸಿದು, ಈಗ ಅವರ ಸಂಸಾರ ಆಲದ ಮರದ ಕೆಳಗಿದೆ!

ಸಹಪಾಠಿ ವಿಜೇತಾ ಭೇಟಿ ಮಾಡಿದ ಮನೆಯವರ ಕಥೆ ಇನ್ನೂ ವಿದ್ರಾವಕ. ಜಿತೇಂದ್ರ ತನ್ನ ಮೂತ್ರಪಿಂಡವನ್ನು ಮಾರಿದಾಗ, ಎಂಟು ಲಕ್ಷ ಮಾತನಾಡಿ, ಕಡೆಗೆ ಅವನಿಗೆ ಎಂಟು ಸಾವಿರ ಮಾತ್ರ ಕೊಟ್ಟಿದ್ದಾರೆ ದಳ್ಳಾಳಿಗಳು. ಕಳೆದ ವರ್ಷ ಇದ್ದ ಒಂದು ಮೂತ್ರಪಿಂಡವೂ ವಿಫಲವಾಗಿ, ಪತ್ನಿ ಸೀತಾ ತನ್ನ ಪತಿಗಾಗಿ, ತನ್ನದೊಂದು ಮೂತ್ರಪಿಂಡವನ್ನೇ ದಾನ ಮಾಡಿದ್ದಾಳೆಂದು ವಿಜೇತಾ ಹೇಳಿದಳು.

***

ನಾವೆಲ್ಲಾ ಡಾ.ಹೃಷಿಕೇಶರೊಂದಿಗೆ ಶಂಕರ ಠಾಕೂರನ ಮನೆ ತಲುಪಿದಾಗ ಸಂಜೆಯಾಗಿತ್ತು. ಇಪ್ಪತ್ತೂರರ ಶಂಕರ ಠಾಕೂರ ನಮ್ಮನ್ನು ಆದರದಿಂದ ಸ್ವಾಗತಿಸಿ ತನ್ನ ದೊಡ್ಡ ಕುಟುಂಬವನ್ನು ಪರಿಚಯಿಸಿದ. ಅವನ ತಂದೆ, ಚಿಕ್ಕಪ್ಪಂದಿರು, ಅಣ್ಣಂದಿರು ಒಟ್ಟು ಏಳು ಜನರು, ಅವನ ಮನೆಯಿಂದಲೇ ಮೂತ್ರಪಿಂಡ ದಾನಿಗಳಾಗಿದ್ದಾರೆಂದು ಹೇಳಿದ ಠಾಕೂರ್. ತನ್ನದೊಂದನ್ನು ಐವತ್ತು ಸಾವಿರಕ್ಕೆ ಮಾರಿಕೊಂಡು ಜೀವನ ಸಾಗಿಸುತ್ತಿರುವುದಾಗಿ ಹೇಳಿದ.

ತನ್ನ ತಂಗಿ ಹದಿನೆಂಟರ ಸುಂದರಿ ರುಕ್ಮಿಣಿಯನ್ನು ನಮಗೆ ಪರಿಚಯಿಸಿದ. 'ನೇಪಾಳದ ಪೋಲೀಸರಿಗೆ ಇವಳು ಪತ್ರ ಬರೆದದ್ದರಿಂದ ದಳ್ಳಾಳಿಗಳನ್ನು ಸೆರೆಹಿಡಿಯಲು ನೆರವಾಯಿತು. ದಾನ ಪಡೆಯುವವರು ಇಪ್ಪತ್ತೈದು ಮೂವತ್ತು ಲಕ್ಷ ಕೊಡುತ್ತಾರಾದರೂ, ದಾನ ನೀಡುವವರಿಗೆ ಸಿಗುವುದು ಬರೀ ಐವತ್ತು ಸಾವಿರದಿಂದ ಲಕ್ಷದೊಳಗೆ ಮಾತ್ರ. ಅನಕ್ಷರಸ್ಥರಾದ ನನ್ನಂತಹ ಹೋಕ್ಸೆಯ ಗ್ರಾಮಸ್ಥರು ಇದನ್ನು ಅರಿತುಕೊಳ್ಳದೆ ದಳ್ಳಾಳಿಗಳ ಬಾಯಿಗೆ ಹಣ ಸುರಿಯುತ್ತಿದ್ದೇವೆ. ಇವಳು ತನ್ನ ಜೀವನವನ್ನೇ ಒತ್ತೆಯಿಟ್ಟು ಧೈರ್ಯದಿಂದ ನೇಪಾಳದ ಸರ್ಕಾರಕ್ಕೆ ಪತ್ರ ಬರೆದಳು. ಇದನ್ನು ಶ್ಲಾಘಿಸಿ ಸರ್ಕಾರ ರುಕ್ಮಿಣಿಯ ಶಿಕ್ಷಣದ ಖರ್ಚನ್ನು ವಹಿಸಿಕೊಂಡಿದೆ' ಎಂದು ತನ್ನ ತಂಗಿಯ ಬುದ್ಧಿವಂತಿಕೆ, ಧೈರ್ಯಸಾಹಸಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡ ಠಾಕೂರ್.

***

ಶೈಕ್ಷಣಿಕ ಪ್ರವಾಸ ಮುಗಿದು, ನಾವೆಲ್ಲಾ ಬಸ್ ಹತ್ತಲು ಸಿದ್ಧರಾಗುತ್ತಿದ್ದೆವು. ನಾವಿಳಿದುಕೊಂಡ ತಾಣದಲ್ಲಿ ಡಾ.ಹೃಷಿಕೇಶ್ ಬೆಳಗ್ಗಿನಿಂದ ಕಂಡಿರಲಿಲ್ಲ. ಅವರು ಬರುವವರೆಗೂ ನಾವು ಹೊರಡುವಂತಿರಲಿಲ್ಲ. ಹಾಗಾಗಿ ಸಾಮಾನುಗಳನ್ನೆಲ್ಲಾ ಬಸ್ಸಿಗೇರಿಸಿ ಕಾಯುತ್ತಾ ನಿಂತೆವು. ಸ್ವಲ್ಪ ಹೊತ್ತಿನಲ್ಲಿ ರಸ್ತೆಯ ತಿರುವಿನಲ್ಲಿ ಡಾ.ಹೃಷಿಕೇಶ್, ಅವರೊಂದಿಗೆ ರುಕ್ಮಿಣಿ, ಕುತ್ತಿಗೆಗೆ ಹಾರ ಧರಿಸಿ ಬರುತ್ತಿರುವುದು ಕಂಡಿತು. ಅವರನ್ನು ಠಾಕೂರನ ಕುಟುಂಬ ತಾಳಮೇಳಗಳೊಂದಿಗೆ ಹಿಂಬಾಲಿಸುತ್ತಿತ್ತು. ನಮ್ಮ ಬಳಿ ಬಂದ ನಮ್ಮ ಸಹಪ್ರಾಧ್ಯಾಪಕರು ಹೀಗೆಂದರು 'ತನ್ನ ಜನಾಂಗದ ವ್ಯಥೆಯ ಕಥೆಯನ್ನು ಸರ್ಕಾರಕ್ಕೆ ತಿಳಿಸಲು ತನ್ನ ಜೀವವನ್ನೇ ಪಣವಾಗಿಟ್ಟ ಈ ರುಕ್ಮಿಣಿಯ ಧೈರ್ಯವನ್ನು ನಾನು ತುಂಬಾ ಮೆಚ್ಚಿಕೊಂಡೆ. ಒಬ್ಬ ಸಮಾಜಶಾಸ್ತ್ರಜ್ಞನಾಗಿ ನಾನು ಇವಳಿಗೊಂದು ಬದುಕನ್ನು ನೀಡಿದ್ದಾದರೆ, ಅದಕ್ಕಿಂತ ದೊಡ್ಡ ಸಮಾಜಸೇವೆ ಬೇರೇನಿದೆ? ಎಂತಲೇ ನಾನು ಈಕೆಯನ್ನು ಮದುವೆಯಾದೆ.'

ನಿಜ! ರುಕ್ಮಿಣಿಗೆ ಒಂದು ಸುಂದರ ಬದುಕನ್ನೇ ದಾನ ಮಾಡಿದ ಡಾ. ಹೃಷಿಕೇಶರ ಬಗ್ಗೆ ನಮಗೆ ಹೆಮ್ಮೆ ಎನಿಸಿತು. 'ಮೂತ್ರಪಿಂಡದ ದಾನ' ಎಂಬ ಸುಳಿಯಲ್ಲಿ ಸಿಲುಕಿ ಜರ್ಝರಿತವಾಗಿರುವ ರುಕ್ಮಿಣಿಯ ಕುಟುಂಬಕ್ಕೆ ಡಾ.ಹೃಷಿಕೇಶರ ಈ ದಿಟ್ಟ ಹೆಜ್ಜೆ ಒಂದು ವರವೇ ಸರಿ. ■